# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌ಸಿ.
# ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3372 /2022

**ಚಾಸಾ ಃ- 06 / ಪ್ರಾಸಾ ಃ- 06**

| | |
|---|---|
| ಹೆಸರು | ಅಶೋಕ್ ಕುಮಾರ್ |
| ತಂದೆ ಹೆಸರು | ಬಿ ಜಿ ಗೌಡ |
| ವಯಸ್ಸು | 73 |
| ಉದ್ಯೋಗ | ವ್ಯವಸಾಯ |
| ವಿಳಾಸ | ಬೆಳಗುಂಬ |

**ದಿನಾಂಕಃ 12.09.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರಿಂದ 5 ಮತ್ತು 7 ರಿಂದ 12 ರವರ ಪರಿಚಯ ಇರುತ್ತದೆ. ಆರೋಪಿಗಳು ಪರಿಚಯ ಇರುತ್ತಾರೆ. ಚಾಸಾ-1 ರವರನ್ನು 1 ನೇ ಆರೋಪಿಗೆ ಕೊಟ್ಟು ದಿನಾಂಕ 04.11.2020 ರಂದು ಚುಂಚನಗಿರಿಯಲ್ಲಿ ವಿವಾಹ ಮಾಡಿಕೊಡಲಾಗಿರುತ್ತದೆ. ಸದರಿ ಮಾತುಕತೆಯ ಸಮಯಂದಲ್ಲಿ ನಾನು, ಚಾಸಾ-2 ರಿಂದ 5 ಹಾಗೂ 7 ರಿಂದ 12 ರವರು ಸೇರಿದ್ದೆವು. ವಿವಾಹಕ್ಕೂ ಮೊದಲು ಚಾಸಾ-2 ರವರ ಮಗ ಎಲೆಕ್ಟ್ರಿಕ್ ಶಾಕ್ ನಿಂದ ಮೃತಪಟ್ಟಿದ್ದ ಕಾರಣ ಮದುವೆಯನ್ನು ಸರಳವಾಗಿ ಚುಂಚನಗಿರಿಯಲ್ಲಿ ಮಾಡಿಸಿರುತ್ತಾರೆ. ಆತನಿಗೆ ಗೋರಿ ಕಟ್ಟಿಸಲು ಚಾಸಾ-1 ರಿಂದ 3 ರವರುಬಂದಿದ್ದರು. ಮನೆಗೆ ಬರುವಾಗ ಸ್ವಲ್ಪ ಲೇಟಾಯಿತು ಎಂದು 1 ನೇ ಆರೋಪಿಯು ಚಾಸಾ-1 ರಿಂದ 3 ರವರಿಗೆ ಗಲಾಟೆ ಮಾಡಿ ಕಳುಹಿಸಿರುತ್ತಾರೆ. ಅಲ್ಲಿಂದ ಈಚೆಗೆ 1 ನೇ ಆರೋಪಿ ಮತ್ತು ಚಾಸಾ-1 ರಿಂದ 3 ರವರ ನಡುವೆ ವೈಮನಷ್ಯ ಉಂಟಾಗಿರುತ್ತದೆ ನಂತರ ನಾವೆಲ್ಲರೂ ಸೇರಿ ನ್ಯಾಯ ಪಂಚಾಯ್ತಿ ಮಾಡಿಸಿರುತ್ತೇವೆ. ನಂತರ 1 ನೇ

ಆರೋಪಿಯು ವಿಚ್ಛೇಧನಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು. 1 ನೇ ಆರೋಪಿಯು ಜಮೀನನ್ನು ಬರೆಸಿಕೊಂಡು ಬಾ ಎಂದು ಚಾಸಾ-1 ರವರಿಗೆ ಹೇಳುತ್ತಿದ್ದರು. ಚಾಸಾ-1 ರವರಿಗೆ ರೂ.55 ಸಾವಿರ ಸಂಬಳ ಬರುತ್ತಿತ್ತು. 1 ನೇ ಆರೋಪಿಯು ಸದರಿ ಸಂಬಳದಲ್ಲಿ ರೂ.5000/- ವನ್ನು ಚಾಸಾ-1 ರವರನ್ನು ಕೊಟ್ಟು ತಾನು ರೂ.50,000/-ಇಟ್ಟು ಕೊಳ್ಳುತ್ತಿದ್ದರು. ನಾವು ಇಬ್ಬರನ್ನೂ ಒಂದು ಮಾಡಲು ಬಹಳ ಪ್ರಯತ್ನ ಪಟ್ಟೆವು ಆದರೂ ಆಗಲಿಲ್ಲ. ನಂತರ ಇಬ್ಬರೂ ವಿಚ್ಛೇಧನ ಬೇಕು ಎಂದು ಹೇಳಿದರು. ವರದಕ್ಷಿಣೆಗಾಗಿ 150 ಗ್ರಾಂ ಚಿನ್ನ ಹಾಗೂ ಮದುವೆ ಮಾಡಿಸಿರುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎಲ್ ಜಿ ಜಿ** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಪಾಟೀಸವಾಲಿಗೆ ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**